ವಿಶೇಷ ಸತ್ರ ಪ್ರಕರಣ ಸಂಖ್ಯೆ:39/2014

ಪ್ರಾಸಾ 01
ಚಾಸಾ 02

ಕರ್ನಾಟಕ ಸರ್ಕಾರ (ಪಿ.ಆರ್.ಪಿ.67)

| ಹೇಳಿಕೆ ಹಾಳೆ (ಆರ್.ಪಿ.ಸಂಖ್ಯೆ: 57) |
|---|
| ನಮೂನೆ ಸಂಖ್ಯೆ 4 (ಸಿವಿಲ್) |

**1ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ**
**ವಿಶೇಷ ಸತ್ರ ಪ್ರಕರಣ ಸಂಖ್ಯೆ:39/2014**

ದಿನಾಂಕಃ 17.10.2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಿತು.

| | | |
|---|---|---|
| ಸಾಕ್ಷಿಯ ಹೆಸರು | : | ನೊಂದ ಬಾಲಕಿ |
| ತಂದೆ ಹೆಸರು | : | XXX |
| ವಯಸ್ಸು | : | 21 ವರ್ಷ |
| ಉದ್ಯೋಗ | : | XXX |
| ವಾಸಸ್ಥಳ | : | XXX |

## ಕಲಂ 299 ಸಿಆರ್ ಪಿಸಿ ಅಡಿಯಲ್ಲಿ ಸಾಕ್ಷಿಯ ವಿಚಾರಣೆ.

**ಮುಖ್ಯ ವಿಚಾರಣೆಃ ಸಾರ್ವಜನಿಕ ಅಭಿಯೋಜಕರಿಂದಃ-**

1. ಚಾಸಾ-1 ನನ್ನ ತಂದೆ, ಚಾಸಾ-3 ನನ್ನ ತಾಯಿ, ಚಾಸಾ-4 ರಿಂದ 14 ಗೊತ್ತು, 1 ಮತ್ತು 2 ನೇ ಆರೋಪಿತರು ಗೊತ್ತಿಲ್ಲ.

2. 2012 ರಲ್ಲಿ ನಾನು ಕೈವಾರದಲ್ಲಿ ಪಿಯುಸಿ ಓದುತ್ತಿದ್ದೆ. 1 ನೇ ಆರೋಪಿ ನನ್ನನ್ನು ಪ್ರೀತಿ ಮಾಡುತ್ತಿದ್ದೇನೆಂದು ಪುಸಲಾಯಿಸಿ ಬುರುಗಮಾಕಲಹಳ್ಳಿ ಗ್ರಾಮದ ಗೇಟ್ ಬಳಿ ಕರೆಯಿಸಿಕೊಂಡಿಲ್ಲ, ಅಲ್ಲಗೆ 2 ನೇ ಆರೋಪಿ ಟಾಟಾ ಸುಮೋ ವಾಹನವನ್ನು ತಂದಿಲ್ಲ, ನನ್ನನ್ನು ವಿಜಯಪುರಕ್ಕೆ ಕರೆದುಕೊಂಡು ಹೋಗಿ 2 ನೇ ಆರೋಪಿ ತಂದು ಕೊಟ್ಟ ತಾಳಿ ಹಾಗೂ ಕಾಲುಂಗುರಗಳನ್ನು

1 ನೇ ಆ ರೋಪಿ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ನನ್ನ ಕುತ್ತಿಗೆಗೆ ತಾಳಿ ಕಟ್ಟಿಲ್ಲ, ಆ ದಿನ 1 ನೇ ಆರೋಪಿ ನನ್ನ ಮೇಲೆ ಲೈಂಗಿಕ ದೌರ್ಜನ್ಯ ಮಾಡಿಲ್ಲ. ನಾನು ಈ ಬಗ್ಗೆ ಪೊಲೀಸರಿಗೆ ಹೇಳಿಕೆ ನೀಡಿಲ್ಲ, ಈಗ ನೋಡುತ್ತಿರುವ ಹೇಳಿಕೆಯನ್ನು ನಿಪಿ 1, ಸಾಕ್ಷಿ ರುಜುವನ್ನು ನಿಪಿ 1(ಎ) ಎಂದು ಗುರುತಿಸಲಾಯಿತು. ಅದರಲ್ಲಿ ಬರೆದ ವಿಚಾರಗಳು ಗೊತ್ತಿಲ್ಲ. ಪೊಲೀಸರು ತಾಳಿ ಹಾಗೂ ಕಾಲುಂಗುರಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನನ್ನ ಸಮಕ್ಷಮ ಮಹಜರ್ ಮಾಡಿಲ್ಲ. ಸದರಿ ಮಹಜರ್ ನ್ನು ನಿಪಿ 2, ಸಾಕ್ಷಿ ರುಜುವನ್ನು ನಿಪಿ 2(ಎ) ಎಂದು ಗುರುತಿಸಲಾಯಿತು.

*3.* ನನ್ನನ್ನು ವೈದ್ಯರ ಬಳಿ ಪರೀಕ್ಷೆಗೆ ಒಳಪಡಿಸಿಲ್ಲ, ಯಾವುದೇ ಬಟ್ಟೆಗಳನ್ನು ಅಮಾನತ್ತು ಪಡಿಸಿಕೊಂಡಿಲ್ಲ. ನಾನು ಯಾವುದೇ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ವಿಶೇಷ ಸಾರ್ವಜನಿಕ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದರು. ಅಭಿಯೋಜಕರಿಗೆ ಅನುಮತಿ ನೀಡಲಾಯಿತು.)

ಪಾಟೀ ಸವಾಲು : ವಿಶೇಷ ಸಾರ್ವಜನಿಕ ಅಭಿಯೋಜಕರಿಂದ:-

*4.* ದಿಃ 16.09.2012 ರಂದು ಆರೋಪಿಯು ನನ್ನ ತಾಯಿಯ ಪೋನಿನಿಂದ ಕರೆ ಮಾಡಿ ನಮ್ಮ ವಗ್ರಾಮದ ಆಂಜನೇಯ ಸ್ವಾಮಿ ದೇವಸ್ಥಾನ ಬಳಿಗೆ ಮನೆಯಲ್ಲಿರುವ ಹಣ ಮತ್ತು ಒಡವೆಗಳನ್ನು ತೆಗೆದುಕೊಂಡು ಬರಲು ಹೇಳಿದ್ದು, ಮನೆಯ ಬೀರು ಬೀಗ ಹಾಕಿದ್ದರಿಂದ ಹಣ ಹಾಗೂ ಒಡವೆಗಳನ್ನು ತೆಗೆದುಕೊಳ್ಳದೇ ಸದರಿ ದೇವಸ್ಥಾನ ಬಳಿ ಹೋಗಿದ್ದು, ಆಗ 1 ನೇ ಆರೋಪಿ ನನ್ನನ್ನು ಒತ್ತಾಯಪೂರ್ವಕವಾಗಿ ಬೂರಗಮಾಕಲಹಳ್ಳಿ ಗ್ರಾಮದ ಬಳಿ

ಕರೆದುಕೊಂಡು ಹೋಗಿದ್ದು, ಅಲ್ಲಿಗೆ **2** ನೇ ಆರೋಪಿ ಟಾಟಾ ಸುಮೊ ವಾಹನವನುನ ತಂದಿದ್ದು, ಅದರಲ್ಲಿ ನನ್ನನ್ನು ವಿಜಯಪುರಕ್ಕೆ ಕರೆದುಕೊಂಡು ಹೋದರು ಎಂದರೆ ಸರಿಯಲ್ಲ.

*5.* ವಿಜಯಪುರ ಸಮೀಪದ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ **2** ನೇ ಆರೋಪಿ ತಂದ ತಾಳಿ ಮತ್ತು ಕರಿಮಣಿ ಸರವನ್ನು **1** ನೇ ಆರೋಪಿ ನನ್ನ ಕುತ್ತಿಗೆಗೆ ಕಟ್ಟಿದ್ದು, ನಂತರ **2** ನೇ ಆರೋಪಿ ನಮ್ಮನ್ನು ಒಂದು ಹಳೆಯ ಮನೆಗೆ ಕರೆದುಕೊಂಡು ಹೋಗಿ ಬಿಟ್ಟಿದ್ದಾನೆ ಎಂದರೆ ಸುಳ್ಳು. ದಿಃ **17.09.2012** ರಂದು **1** ನೇ ಆರೋಪಿ ನನ್ನ ಮೇಲೆ ಅತ್ಯಾಚಾರ ಮಾಡಿದ್ದಾನೆಂದರೆ ಸರಿಯಲ್ಲ.

*6.* ಪೊಲೀಸರು ನಮ್ಮನ್ನು ಪತ್ತೆ ಮಾಡಿದ ನಂತರ ನಾನು ನಿಪಿ **1** ರಂತೆ ಹೇಳಿಕೆ ನೀಡಿದ್ದೇನೆ ಎಂದರೆ ಸುಳ್ಳು. ನಾನು ಪೊಲೀಸರಿಗೆ **1** ನೇ ಆರೋಪಿ ಕಟ್ಟಿದಂತಹ ತಾಳಿ ಮತ್ತು ಕಾಲುಂಗುರಗಳನ್ನು ಹಾಜರುಪಡಿಸಿದ್ದು, ಅದನ್ನು ದಿಃ **19.09.2012** ರಂದು ನಿಪಿ **2** ರಂತೆ ಮಹಜರ್ ಮಾಡಿ ಅಮಾನತ್ತು ಪಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

*7.* ನನ್ನನ್ನು ವೈದ್ಯಕೀಯ ತಪಾಸಣೆಗೆ ಒಳಪಡಿಸಿದ್ದಾರೆ ಎಂದರೆ ಸುಳ್ಳು. ಆರೋಪಿಗೆ ಸಹಾಯ ಮಾಡಲು ಎಲ್ಲಾ ವಿಚಾರ ಗೊತ್ತಿದ್ದು, ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ.

*(ಇನ್ ಕ್ಯಾಮರ ನಡವಳಿ ಮುಖಾಂತರ ಸಾಕ್ಷಿಯ ಹೇಳಿಕೆ* ಯನ್ನು ಅವರ ತಾಯಿಯ *ಪಡೆಯಲಾಯಿತು)*

ಫ್ರಾಸಾ 01
ಚಾಸಾ 02

**(ದಿನಾಂಕಃ 17.10.2019 ರಂದು ಗೌಪ್ಯ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓದಿ ಹೇ ಕೇ ಸರಿ ಇದೆ**

**ಸಹಿ/-**

**(ಎಸ್. ನಟರಾಜ್)**
**1ನೇ ಹೆಚ್ಚುವರಿ ಜಿಲ್ಲಾ ಮತ್ತು (ವಿಶೇಷ) ಸತ್ರ ನ್ಯಾಯಾಧೀಶರು,**
**ಚಿಕ್ಕಬಳ್ಳಾಪುರ.**